## ಆರನೇ ತರಗತಿ – ಪ್ರಥಮ ಭಾಷೆ ಕನ್ನಡ

## ಶಿಕ್ಷಕರಿಗೆ ಸೂಚನೆಗಳು

**ಆತ್ಮೀಯ ಶಿಕ್ಷಕ ಬಂಧುಗಳೇ,**

2020-21ನೇ ಶೈಕ್ಷಣಿಕ ಸಾಲಿನಲ್ಲಿ ಆರನೇ ತರಗತಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಕೋವಿಡ್ - 19 ಹಿನ್ನೆಲೆಯಿಂದಾಗಿ ನಾಲ್ಕನೇ ತರಗತಿ ಅಂತ್ಯದಲ್ಲಿ ಯಾವುದೇ ಮೌಲ್ಯಮಾಪನಕ್ಕೂ ಒಳಪಡದೆ, ಐದನೇ ತರಗತಿಗೆ ಪ್ರವೇಶ ಪಡೆದಿದ್ದು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಗೆ ಆಗಮಿಸದೆ ಆರನೇ ತರಗತಿಗೆ ನೇರವಾಗಿ ಪ್ರವೇಶ ಪಡೆದಿರುತ್ತಾರೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿರಿಸಿಕೊಂಡು 2021-22ನೇ ಶೈಕ್ಷಣಿಕ ಸಾಲಿನಲ್ಲಿ ನಲವತ್ತೈದು ದಿನಗಳ ಸೇತುಬಂಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

30 ದಿನಗಳ ಸೇತುಬಂಧ ಕಾರ್ಯಕ್ರಮ ಅನುಷ್ಠಾನಕ್ಕಾಗಿ ಶಿಕ್ಷಕರು ಈ ಕೆಳಕಂಡ ಪೂರ್ವಸಿದ್ಧತೆಗಳೊಂದಿಗೆ ತರಗತಿಯನ್ನು ನಿರ್ವಹಿಸುವ ಮೂಲಕ ಸೇತುಬಂಧವನ್ನು ಯಶಸ್ವಿಗೊಳಿಸಲು ಸಾಧ್ಯವಾಗುತ್ತದೆ.

- ಸೇತುಬಂಧ ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಗಳ ಪಟ್ಟಿ ಒಂದು ಮಾದರಿಯಾಗಿದ್ದು, ಶಿಕ್ಷಕರು ಸರಳ / ಪೂರಕ / ಸ್ಥಳೀಯ ಅಗತ್ಯ ಚಟುವಟಿಕೆಗಳನ್ನು ರೂಪಿಸಿಕೊಳ್ಳಬಹುದು.
- ಸಾಹಿತ್ಯವನ್ನು ಓದಿದ ಶಿಕ್ಷಕರು ದಿನಕ್ಕೊಂದು ಚಟುವಟಿಕೆಯನ್ನು ತರಗತಿಯಲ್ಲಿ ಅನುಷ್ಠಾನಗೊಳಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಾದ ಮಿಂಚು ಪಟ್ಟಿಗಳು, ಗಾದೆಗಳು, ಚಿತ್ರಕಥಾ ಸರಣಿಗಳು, ಸನ್ನಿವೇಶದ ಕಾರ್ಡ್‌ಗಳು, ಭಿತ್ತಿ ಪತ್ರಗಳು, ಕರಪತ್ರಗಳು, ಮಾದರಿ ಪತ್ರಗಳ ಚಾರ್ಟ್ ಗಳು, ಸೂಚನಾ ಫಲಕಗಳು, ಸಣ್ಣ ಕಥೆ, ಕವನಗಳನ್ನು ಸಂಗ್ರಹಿಸಿಕೊಳ್ಳುವುದು ಅಥವಾ ಸಿದ್ಧಪಡಿಸಿಕೊಳ್ಳುವುದು.
- ಕಲಿಕಾ ಚಟುವಟಿಕೆಗಳ ನಿರ್ವಹಣೆಯೊಂದಿಗೆ ಮೌಲ್ಯಮಾಪನ ಕಾರ್ಯವು ಅಂತರ್ಗತವಾಗಿರುತ್ತದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

**ಆರನೆಯ ತರಗತಿ** **ಪ್ರಥಮ ಭಾಷೆ ಕನ್ನಡ**

ಸೇತು ಬಂಧ

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಯ ನಿರ್ವಹಣೆಗೆ ಸೂಚನೆಗಳು |
|---|---|---|---|---|
| **1.** | **ಕ್ಷೇತ್ರ: ಆಲಿಸುವುದು.**<br><br>1. ಭಾಷಾ ಆಟಗಳನ್ನು ಆಡುವ ಮತ್ತು ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳ ಸರಣಿಯನ್ನು ಅರ್ಥಮಾಡಿಕೊಳ್ಳುವವರು. | * ಆಟದ ನಿಯಮವನ್ನು ಅರ್ಥೈಸಿಕೊಂಡು ಆಟವನ್ನು ಸರಿಯಾದ ಕ್ರಮದಲ್ಲಿ ಆಡುತ್ತಾರೆ. | 1.1 ಗುಟ್ಟು ರಟ್ಟು<br>1.2 ಅಕ್ಷರ ಹುಡುಕು<br>1.3 ಓದಿ ಗುರಿ ಮುಟ್ಟು | 1.1 ಶಿಕ್ಷಕರು ಒಬ್ಬ ವಿದ್ಯಾರ್ಥಿಯ ಕಿವಿಯಲ್ಲಿ ಹೇಳಿದ ಪದ/ವಾಕ್ಯವನ್ನು ಆ ವಿದ್ಯಾರ್ಥಿಯು ಮತ್ತೊಬ್ಬ ವಿದ್ಯಾರ್ಥಿಯ ಕಿವಿಯಲ್ಲಿ ಹೇಳುತ್ತಾ ಆಟವನ್ನು ಮುಂದುವರಿಸಿ ಕೊನೆಯ ವಿದ್ಯಾರ್ಥಿಯಿಂದ ಜೋರಾಗಿ ಹೇಳಿಸಿ.<br>ಉದಾ: ಆರತಿಗೊಬ್ಬ ಮಗಳು, ಕೀರುತಿಗೊಬ್ಬ ಮಗ. |
| **2.** | | * ಸರಳ ಕಾರ್ಯ ಕಾರಣ ಸಂಬಂಧ ತಿಳಿಯಲು ಸಮರ್ಥರಾಗುತ್ತಾರೆ. | 2.1 ನೀ ಕೇಳು ಮಗುವೆ<br>2.2 ಧ್ವನಿ ಮುದ್ರಿಕೆ ಆಲಿಸುವಿಕೆ.<br>2.3 ಹಾಡು ಪಾಡು. | 2.1 ಗೋವಿನ ಹಾಡಿನಂತಹ ಮೌಲ್ಯಯುತ ಗೀತೆಗಳನ್ನು ವಿದ್ಯಾರ್ಥಿಗಳಿಗೆ ಕೇಳಿಸಿ.<br>2.3 ಶಿಕ್ಷಕರೇ ರಾಗವಾಗಿ ಹಾಡಿ ಕವಿತೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಗಳಿಗೆ ಉತ್ತರಗಳನ್ನು ನೀಡಲು ಪ್ರೇರೇಪಿಸಿ. |
| **3.** | | * ಆಲಿಸಿದ ನಂತರ ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? ಎಂಬ ಸರಳ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುತ್ತಾರೆ | 3.1 ಕೇಳು ಗೆಳೆಯ ನನ್ನ ಮಾತು.<br>3.2 ನಾನೊಂದು ಕಥೆ ಹೇಳುವೆ.<br>3.3 ಕವನ ಕೇಳಿ ಉತ್ತರಿಸು.<br>3.4 ಚಿಂತನ ಕೇಳೋಣ. | 3.1 ಶಿಕ್ಷಕರು ಮಕ್ಕಳಿಂದ ನೀತಿ ಕಥೆ, ಕವನ ಹೇಳಿಸಿ ಅವುಗಳ ಬಗೆಗಿನ ಸರಳ ಪ್ರಶ್ನೆಗಳಿಗೆ ವಿದ್ಯಾರ್ಥಿಗಳೇ ಉತ್ತರಿಸುವಂತೆ ಪ್ರೇರೇಪಿಸಿ.<br>3.4 ಪ್ರಸಿದ್ಧ ವಾಗ್ಮಿಗಳ ಚಿಂತನ ಸರಣಿಗಳ ಧ್ವನಿಸುರುಳಿಯನ್ನು ಆಲಿಸುವಂತೆ ಶಿಕ್ಷಕರು ಅನುಕೂಲಿಸಿ. |

| | | | | |
|---|---|---|---|---|
| | | . | | |
| **4.** | **ಕ್ಷೇತ್ರ : ಮಾತನಾಡುವುದು.**<br>**2.** ಸನ್ನಿವೇಶ ಮತ್ತು ಘಟನೆಗಳ ಕುರಿತು ನಿಖರವಾಗಿ ಮಾತನಾಡುವರು. | * ಪದ್ಯವನ್ನು ರಾಗಬದ್ಧವಾಗಿ ಹಾಡುತ್ತಾರೆ. | 4.1 ಹಾಡೊಂದ ನಾ ಹಾಡುವೆ!<br>4.2 ನನ್ನ ನೆಚ್ಚಿನ ಗೀತೆ.<br>4.3 ಪ್ರಾದೇಶಿಕ ಗೀತೆ ನಮ್ಮ ಹೆಮ್ಮೆ. | 4.1 ಮಕ್ಕಳಿಂದ ತಮಗಿಷ್ಟವಾದ ಹಾಡು/ ನೆಚ್ಚಿನ ಗೀತೆ/ ಪ್ರಾದೇಶಿಕ ಗೀತೆಗಳನ್ನು ಹಾಡಿಸಿ ಅದರ ಸಾರಾಂಶದ ಬಗ್ಗೆ ಚರ್ಚಿಸಲು ಅನುಕೂಲಿಸಿ.<br>4.2 ಮಕ್ಕಳಿಗಿಷ್ಟವಾದ ಗೀತೆ ಹಾಡುವಂತೆ ಪ್ರೇರೇಪಿಸಿ. |
| **5.** | | * ಪರಿಚಿತ ವಿಷಯಗಳನ್ನು ತನ್ನದೇ ಮಾತಿನಲ್ಲಿ ಅಭಿವ್ಯಕ್ತಪಡಿಸುತ್ತಾರೆ. | 5.1 ನೀನೆಂದರೆ ಇಷ್ಟ, ಏಕೆಂದರೆ? ಸ್ಪಷ್ಟ.<br>5.2 ನನ್ ಕನಸು ನನ್ ಮಾತು.<br>5.3 ಪ್ರವಾಸ ಕಥನ.<br>5.4 ಆಶುಭಾಷಣ<br>5.5 ಹರಟೆ | 5.1 ವಿದ್ಯಾರ್ಥಿಯು ತನಗೆ ಇಷ್ಟವಾದ ವಸ್ತು / ವ್ಯಕ್ತಿಗಳ ಬಗ್ಗೆ ನಿರರ್ಗಳವಾಗಿ ಮಾತನಾಡಲು ಪ್ರೇರೇಪಿಸಿ. |
| **6.** | | * ಒಗಟನ್ನು ಬಿಡಿಸುವ ಕೌಶಲ ಹೊಂದುತ್ತಾರೆ. | 6.1 ನಾನ್ಯಾರು ನೀ ಹೇಳೋ ಜಾಣ.<br>6.2 ಓದಿಕೊಂಡು ಅರ್ಥ ಹೇಳು.<br>6.3 ಒಗಟಿಗೆ ಒಗಟಿನ ಯುದ್ಧ.<br>6.4 ಒಗಟಿಗೊಂದು ಕಥೆ. | 6.1 ಅನೇಕ ಒಗಟುಗಳನ್ನು ಸಂಗ್ರಹಿಸಿಕೊಂಡು ಒಗಟಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಕಥೆ ಹೇಳಿಸಿ, ಅರ್ಥ ತಿಳಿಸಿ, ಒಗಟಿನ ಸೌಂದರ್ಯವನ್ನು ಆಸ್ವಾದಿಸಿ. |

| | | | | |
|---|---|---|---|---|
| **7.** | **3.** ಸನ್ನಿವೇಶಕ್ಕೆ ತಕ್ಕಂತೆ ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆ ಬಳಸುವರು. | * ಆಡು ಭಾಷೆ ಮತ್ತು ಗ್ರಾಂಥಿಕ ಭಾಷೆಗಳ ನಡುವಿನ ವ್ಯತ್ಯಾಸ ಗುರುತಿಸುವರು. | 7.1 ನನ್ನನ್ನು ಬೇರೆ ಮಾಡು.<br>7.2 ನನ್ನೂರ ಭಾಷೆ ನಿಮ್ಮೂರ ಭಾಷೆ.<br>7.3 ಗ್ರಾಮ್ಯ ಪದಗಳಿಗೆ ಗ್ರಾಂಥಿಕ ಪದಗಳ ಹೊಂದಿಸು | 7.1 ಶಿಕ್ಷಕರು ಕಪ್ಪು ಹಲಗೆಯ ಮೇಲೆ ಅನೇಕ ಆಡುಭಾಷೆ ಮತ್ತು ಗ್ರಾಂಥಿಕ ರೂಪದ ಪದಗಳನ್ನು ಬರೆದು ಆಡು ಭಾಷೆ ಪದಗಳಿಗೆ ವಿದ್ಯಾರ್ಥಿಗಳು ವೃತ್ತ ಹಾಕುವರು ಹಾಗೂ ಆಡುಭಾಷಾ ಪದಗಳ ಬಗ್ಗೆ ಸಾಂದರ್ಭಿಕವಾಗಿ ಮಾತನಾಡುವಂತೆ ಅನುಕೂಲಿಸಿ. |
| **8.** | | * ಆಡು ಭಾಷೆ ಮತ್ತು ಗ್ರಾಂಥಿಕ ಭಾಷಾ ಪದಗಳನ್ನು ಹೊಂದಿಸುತ್ತಾರೆ. | 8.1 ನನ್ನಯ ಜೋಡಿ, ಕೂಡಿಸಿ ನೋಡಿ.<br>8.2 ಆಡು ಭಾಷೆಯಲ್ಲಿ ಕಥೆ ಹೇಳು. | 8.1 'ಅ' ಪಟ್ಟಿಯಲ್ಲಿನ ಆಡು ಭಾಷೆಯ ಪದಗಳಿಗೆ 'ಬ' ಪಟ್ಟಿಯಲ್ಲಿನ ಸೂಕ್ತ ಗ್ರಾಂಥಿಕ ಪದ ಆರಿಸಿ ಗೆರೆ ಎಳೆದು ಹೊಂದಿಸಿ.<br>8.2 ಆಡು ಭಾಷೆಯಲ್ಲಿಯೇ ವಿದ್ಯಾರ್ಥಿಗಳಿಂದ ಕಥೆ ಹೇಳಿಸಿ. |
| **9.** | | * ಸಂದರ್ಭಕ್ಕೆ ತಕ್ಕಂತೆ ಆಡು ಭಾಷೆಗೆ ತಕ್ಕ ಗ್ರಾಂಥಿಕ ಭಾಷೆಯನ್ನು ಬಳಸುವ ಕೌಶಲವನ್ನು ಬೆಳೆಸಿಕೊಳ್ಳುತ್ತಾರೆ. | 9.1 ರೂಪ – ಪ್ರತಿರೂಪ.<br>9.2 ಅದಲು ಬದಲು. | 9.2 ಶಿಕ್ಷಕರು ಆಡು ಭಾಷೆಯಲ್ಲಿನ ವಾಕ್ಯ ವೃಂದಗಳನ್ನು ಮೊದಲೇ ಸಿದ್ಧಪಡಿಸಿಕೊಂಡಿದ್ದು ಅವುಗಳಿಗೆ ಗ್ರಾಂಥಿಕ ರೂಪದಲ್ಲಿ ಮಕ್ಕಳಿಂದ ಹೇಳಿಸಿ ಹಾಗೂ ಆಡುಭಾಷೆ ಮತ್ತು ಗ್ರಾಂಥಿಕ ಭಾಷೆಗೆ ವಾಕ್ಯಗಳನ್ನು ಅದಲು ಬದಲು ಮಾಡಿಲು ಪ್ರೇರೇಪಿಸಿ. |
| **10.** | **4.** ನಿಘಂಟು ಬಳಸುವ ವಿಧಾನ, ನಿಯಮಗಳನ್ನು ತಿಳಿಯುವರು. | * ಸರಳ ಪದಗಳನ್ನು ಕನ್ನಡ ವರ್ಣಮಾಲೆ ಕ್ರಮದಲ್ಲಿ ಜೋಡಿಸುತ್ತಾರೆ. | 10.1 ಅಕ್ಷರ ಪದ ಆಟ.<br>10.2 ಅಕ್ಷರ ಪದಬಂಧ.<br>10.3 ಅಕ್ಷರ | 10.1 ನೀಡಿರುವ ಅ ಯಿಂದ ಔ ವರೆಗಿನ ಪದಗಳ ಮಿಂಚುಪಟ್ಟಿಯನ್ನು ಅನುಕ್ರಮವಾಗಿ ಜೋಡಿಸಿ.<br>10.2 ಸ್ವರ ವ್ಯಂಜನ ಯೋಗವಾಹಕಗಳ ಕುರಿತ ಪದಬಂಧವನ್ನು ಬಿಡಿಸಿ ಹಾಗೂ |

| | | | | |
|---|---|---|---|---|
| | | | ಜೋಡಿಸು ಹೊಸ ಪದ ರಚಿಸು. | ಕನಿಷ್ಠ ಅಕ್ಷರದಲ್ಲಿ ಗರಿಷ್ಠ ಪದ ರಚಿಸುವಂತೆ ಅನುಕೂಲಿಸಿ. |
| **11.** | | * ಪದಗಳನ್ನು ಅಕಾರಾದಿಯಾಗಿ ಜೋಡಿಸುತ್ತಾರೆ. | 11.1 ಪದ ಜೋಡಣೆ<br>11.2 ಗುಣಿತಾಕ್ಷರ ಪದ ಜೋಡಣೆ.<br>11.3 ನನ್ನ ಸೇರಿಸು ನನ್ನ ಗುಂಪಿನಲ್ಲಿ.<br>11.4 ತೆರೆಯೋಣ ನಿಘಂಟು | 11.1 ನೀಡಿರುವ ಹಲವು ಪದಗಳನ್ನು ಅಕಾರಾದಿಯಾಗಿ ನಿಘಂಟಿನ ಸಹಾಯದಿಂದ ಜೋಡಿಸುವಂತೆ ಪ್ರೇರೇಪಿಸಿ.<br>11.2 ಸ್ವರಾಕ್ಷರ ಪದಗಳಂತೆಯೆ ಗುಣಿತಾಕ್ಷರ ಪದಗಳನ್ನು ನೀಡಿ ಕ್ರಮವಾಗಿ ಜೋಡಿಸಿ ಹೇಳಿಸಿ.<br>ಉದಾ; ಕ- ಕಥೆ, ಕಾ- ಕಾಗೆ, ಕಿ- ಕಿಟಕಿ |
| **12.** | | * ಸರಳ ಪದಗಳ ಅರ್ಥ ತಿಳಿಯುತ್ತಾರೆ. | 12.1 ಪದ ಬಾಲಂಗೋಚಿ.<br>12.2 ನಿನ್ನ ಮಾತಿಗೆ ನನ್ನ ಪದ.<br>12.3 ಅಂತ್ಯಾಕ್ಷರಿ ಪದಕಟ್ಟು. | 12.1 ಶಿಕ್ಷಕರು ಕಪ್ಪು ಹಲಗೆಯ ಮೇಲೆ ಪದವೊಂದನ್ನು ಬರೆದು, ಆ ಪದದ ಕೊನೆಯ ಅಕ್ಷರದಿಂದ ಪ್ರಾರಂಭವಾಗುವ ಪದವನ್ನು ಬರೆಯಲು ವಿದ್ಯಾರ್ಥಿಗೆ ಸೂಚಿಸಿ, ಆ ವಿದ್ಯಾರ್ಥಿ ಬರೆದ ಪದದ ಕೊನೆಯ ಅಕ್ಷರದಿಂದ ಪ್ರಾರಂಭವಾಗುವ ಪದವನ್ನು ಮುಂದಿನ ವಿದ್ಯಾರ್ಥಿಯಿಂದ ಬರೆಸಿ ಆಟವನ್ನು ಮುಂದುವರೆಸಿ. ಚಟುವಟಿಕೆಯಲ್ಲಿ ಬಂದ ಹೊಸ ಪದಗಳಿಗೆ ನಿಘಂಟಿನಲ್ಲಿ ಅರ್ಥ ಹುಡುಕುವಂತೆ ಪ್ರೇರೇಪಿಸಿ. |
| **13.** | **ಕ್ಷೇತ್ರ: ಓದುವುದು.**<br>**5.** ಸುಮಾರು 1000 ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯ ಪಡೆಯುವರು. | * ಸಮಾನಾರ್ಥಕ ಪದಗಳನ್ನು ಓದುತ್ತಾರೆ. | 13.1 ನಾವೆಲ್ಲಾ ಒಂದೇ!<br>13.2 ನನ್ನ ಸಮ ಯಾರು ಯಾರು?<br>13.3 ನಾನು ನಿನ್ನ | 13.1 ಅನೇಕ ಸಮಾನಾರ್ಥಕ ಪದಗಳ ಮಿಂಚುಪಟ್ಟಿಗಳನ್ನು ತರಗತಿಯ ಪ್ರತೀ ಮಗುವಿಗೆ ನೀಡಿ, ಸಮಾನ ಅರ್ಥವಿರುವ ಪದ ಸಿಕ್ಕಿರುವ ಮಕ್ಕಳು ಒಂದು ಗುಂಪಾಗಿ ವಿಂಗಡಿಸಿ. |

| | | | | |
|---|---|---|---|---|
| | | | ಹಾಗೇ.<br>13.4 ಓದು ಕೈಬರಹ | 13.2 ಶಿಕ್ಷಕರು ಮಕ್ಕಳ ಗುಂಪನ್ನು ಗಮನಿಸಿ ಸರಿ / ತಪ್ಪು ಹೇಳಿಸಿ, ಪದಗಳನ್ನು ಪಟ್ಟಿಮಾಡಿಸಿ. |
| 14. | | | 14.1 ಈರುಳ್ಳಿ ಸಿಪ್ಪೆ ಸುಲಿಯುವ ಆಟ.<br>14.2 ನಿಘಂಟು ತೆರೆ ನನ್ನ ಸಹಪಾಠಿ ಹುಡುಕು.<br>14.3 ಪದ ಮಂಡನೆ | 14.1 ಮಕ್ಕಳನ್ನು ವೃತ್ತದಲ್ಲಿ ಕೂರಿಸಿ ಪದ ಬರೆದ ಹಾಳೆಗಳನ್ನು ಸುತ್ತಿ ಈರುಳ್ಳಿಯಂತೆ ಮಾಡಿರುವ ಚೆಂಡನ್ನು ಮಕ್ಕಳಿಗೆ ನೀಡಿ ಆಟವನ್ನು ಆಡಿಸಿ. ವಿಶಲ್ ಊದಿದಾಗ ಯಾವ ಮಗುವಿನ ಕೈಯಲ್ಲಿ ಈರುಳ್ಳಿ ಇರುತ್ತದೆಯೋ ಆ ಮಗು ಸಿಪ್ಪೆ ಸುಲಿದು ಅದರಲ್ಲಿರುವ ಪದಕ್ಕೆ ಸಮಾನಾರ್ಥಕ ಪದಗಳನ್ನು ಹೇಳಿಸಿ. ಬಂದ ಪದಕ್ಕೆ ನಿಘಂಟಿನಲ್ಲಿ ಬರುವ ಸಮನಾರ್ಥಕ ಪದಗಳನ್ನು ಹುಡುಕಿಸಿ.<br>**ಸೂಚನೆ:** ಹಿಂದಿನ ತರಗತಿಯಲ್ಲಿ ಬಳಕೆಯಾಗಿರುವ ಸಮಾನಾರ್ಥಕ ಪದಗಳನ್ನು ಬಳಕೆ ಮಾಡಿಕೊಳ್ಳುವುದು ಸೂಕ್ತ. |
| 15. | | * ವಿರುದ್ಧಾರ್ಥಕ ಪದಗಳನ್ನು ಅರಿತು ಓದುತ್ತಾರೆ. | 15.1 ಮಡಿಕೆ ತುಂಬಿಸುವ ಆಟ.<br>15.2 ನಾನಾ ನೀನಾ<br>15.3 ಹಾವು ಮುಂಗುಸಿ. | 15.1 ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಿ (ಕಪ್ಪು ಹಲಗೆಯ ಮೇಲೆ ಎರಡು ಮಡಿಕೆ ಚಿತ್ರಗಳನ್ನು ಬರೆದು) ಒಂದು ಗುಂಪಿನ ವಿದ್ಯಾರ್ಥಿ / ವಿದ್ಯಾರ್ಥಿನಿಯು ಒಂದು ಮಡಿಕೆಯಲ್ಲಿ ಒಂದು ಪದವನ್ನು ಬರೆದಾಗ ಇನ್ನೊಂದು ಗುಂಪಿನ ಮಗುವು ಇನ್ನೊಂದು ಮಡಿಕೆಯಲ್ಲಿ ಆ ಪದಕ್ಕೆ ಸರಿಯಾದ |

<table>
<tr><td></td><td></td><td></td><td></td><td>ವಿರುದ್ಧಾರ್ಥಕ ಪದ ರಚಿಸಲು ಸೂಚಿಸಿ.</td></tr>
<tr><td>16.</td><td rowspan="2">6. ಮುದ್ರಿತ ಪಠ್ಯವನ್ನು ಓದಿದ ಬಳಿಕ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು.</td><td>* ಓದಿದ ಪಠ್ಯದಲ್ಲಿನ ವಿಷಯವನ್ನಾಧರಿಸಿ ಕೇಳುವ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸುತ್ತಾರೆ.</td><td>16.1 ನಾ ಕೇಳ್ತೀನಿ, ನೀ ಹೇಳ್ತೀಯಾ?<br>16.2 ನಿನ್ನ ಓದಿಗೆ ನನ್ನ ಉತ್ತರ.<br>16.3 ಉತ್ತರ ಹುಡುಕು</td><td>16.1 ಕಥೆಯೊಂದರ ಚಿತ್ರಸರಣಿಯನ್ನು ನೀಡಿ, ಸರಳ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಿಸಿ.</td></tr>
<tr><td>17.</td><td>* ಕವಿತೆಗಳನ್ನು ಅರ್ಥಪೂರ್ಣವಾಗಿ ಓದುತ್ತಾರೆ ಹಾಗೂ ಲಯಬದ್ಧವಾಗಿ ಹಾಡುತ್ತಾರೆ.</td><td>17.1 ಹಾಡೊಂದ ನಾ ಹಾಡುವೆ.<br>17.2 ನನ್ನ ಇಷ್ಟದ ಪದ್ಯ.<br>17.3 ಪದ್ಯಕ್ಕೊಂದು ಕಥೆ.</td><td>17.1 ಮಕ್ಕಳು ನಿಯತಕಾಲಿಕೆ/ ವಾರಪತ್ರಿಕೆಗಳಲ್ಲಿ ಸಿಗಬಹುದಾದ ಶಿಶುಗೀತೆಗಳು, ಕವನಗಳನ್ನು ಸಂಗ್ರಹಿಸಿ ರಾಗಬದ್ಧವಾಗಿ ಹಾಡಿಸಿ.<br>17.2 ಕವಿತೆಗಳನ್ನು ಶಿಕ್ಷಕರು ರಾಗಬದ್ಧವಾಗಿ ಹೇಳಿಕೊಟ್ಟು ಮಕ್ಕಳಿಂದ ಗುಂಪುಗಳಲ್ಲಿ ಹಾಡಿಸಿ.</td></tr>
<tr><td>18.</td><td rowspan="2">ಕ್ಷೇತ್ರ: ಬರೆಯುವುದು.<br><br>7. ಅಕ್ಷರ ಮತ್ತು ಪದಗಳನ್ನು ಸರಿಯಾದ ವಿನ್ಯಾಸ, ಅನುಕ್ರಮತೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವರು.</td><td>* ಸ್ವರ ವ್ಯಂಜನಾಕ್ಷರಗಳನ್ನು ಗುರುತಿಸುತ್ತಾರೆ.</td><td>18.1 ನನ್ನ ಸ್ಥಾನ ನನ್ನದೇ!<br>18.2 ನಮ್ಮ ಗುಂಪಿನ ಸದಸ್ಯರು ಯಾರು ಯಾರು?<br>18.3 ಪದಬಂಧ</td><td>18.1 ಶಿಕ್ಷಕರು ಹೇಳಿದ ಅಕ್ಷರವನ್ನು ವಿದ್ಯಾರ್ಥಿಗಳು ವರ್ಣಮಾಲೆಯಲ್ಲಿನ ಆಯಾ ಅಕ್ಷರಗಳ ಸರಿಯಾದ ಸ್ಥಾನದಲ್ಲಿ ಗುರುತಿಸಿ ಬರೆಸಿ.<br>ಉದಾ :<table><tr><td>ಅ</td><td></td><td></td><td>ಈ</td><td></td><td></td><td></td></tr><tr><td></td><td>ಓ</td><td></td><td></td><td></td><td colspan="2"></td></tr></table></td></tr>
<tr><td>19.</td><td>* ಅಲ್ಪ ಪ್ರಾಣ, ಮಹಾಪ್ರಾಣ, ಅನುನಾಸಿಕಗಳನ್ನು ಬರೆಯುತ್ತಾರೆ.</td><td>19.1 ವರ್ಗೀಕರಣ.<br>19.2 ನನ್ನನ್ನು ಗುರುತಿಸು.<br>19.3 ನನ್ನ ಪ್ರಾರಂಭದಿಂದ ಪದ</td><td>19.1 ಹೇಳುವ ಪದವನ್ನು ಆಲಿಸಿ ಸ್ವರ, ವ್ಯಂಜನ, ಅಲ್ಪಪ್ರಾಣ, ಮಹಾಪ್ರಾಣ ಅಕ್ಷರಗಳನ್ನು ವರ್ಗೀಕರಿಸಿ ಬರೆಸಿ.<br>19.3 ಅಲ್ಪ ಪ್ರಾಣ, ಮಹಾ ಪ್ರಾಣ ಅಕ್ಷರಗಳಿರುವ ಪದಗಳನ್ನು ರಚಿಸಲು</td></tr>
</table>

| | | | | |
|---|---|---|---|---|
| | | | ಕಟ್ಟು. | ಪ್ರೇರೇಪಿಸಿ. |
| **20.** | | * ಸಜಾತಿ, ವಿಜಾತಿ ಸಂಯುಕ್ತಾಕ್ಷರಗಳನ್ನು ಪತ್ತೆ ಹಚ್ಚಿ ಬರೆಯುತ್ತಾರೆ. | 20.1 ಗುಂಪು ರಚನೆ.<br>20.2 ಪದಕ್ಕೊಂದು ಪದ ಹೇಳು.<br>20.3 ನಾನೇ ಬೇರೆ ನೀನೇ ಬೇರೆ. | 20.1 ಶಿಕ್ಷಕರು ಮಕ್ಕಳನ್ನು ಗುಂಪುಗಳಾಗಿ ವಿಗಂಡಿಸಿ ಪ್ರತೀ ಗುಂಪಿಗೂ ಒಂದು ಸಣ್ಣ ಕಥೆಯನ್ನು ನೀಡಿ ಅದರಲ್ಲಿರುವ ಸಜಾತಿ, ವಿಜಾತಿ ಸಂಯುಕ್ತಾಕ್ಷರ ಪದಗಳನ್ನು ಗುರುತಿಸಿ ವಿಗಂಡಿಸಿ ಬರೆಸಿ. |
| **21.** | | * ಸೂಕ್ತ ಅಂತರದೊಂದಿಗೆ ಸ್ಫುಟವಾಗಿ ಬರೆಯುತ್ತಾರೆ. | 21.1 ಕಾಪಿ ಬರೆವಣಿಗೆ<br>21.2 ಪದಗಳೊಡನೆ ಸರಸ<br>21.3 ಮಿತ್ರನಿಗೊಂದು ಪತ್ರ. | 21.1 ಯಾವುದೇ ಗದ್ಯ / ಪದ್ಯದ ಒಂದು ಪುಟದಷ್ಟು ಕಾಪಿ ಬರವಣಿಗೆ ಬರೆಸಿ.<br>21.2 ಶಿಕ್ಷಕರು ನೀಡಿದ ಪದದಿಂದ ವಿದ್ಯಾರ್ಥಿಗಳು ಹಲವು ಪದಗಳನ್ನು ರಚಿಸಲು ಪ್ರೇರೇಪಿಸಿ. **ಉದಾ :** *ವಿಜಯನಗರ*– ಜಯ, ವಿಜಯ, ನಯ, ವಿನಯ, ಗಜ, ರಜ, ನಗರ, ಗರ, ನರ, ರವಿ, ಜಗ |
| **22.** | **8.** ಸರಳ ಲೇಖನ ಚಿಹ್ನೆಗಳಿರುವ ಉಕ್ತಲೇಖನ ತೆಗೆದುಕೊಳ್ಳುವರು. | * ವಿವಿಧ ಲೇಖನ ಚಿನ್ಹೆಗಳನ್ನು ಅವುಗಳ ಸರಿಯಾದ ಕ್ರಮ ವಿನ್ಯಾಸ ಅರಿತು ಬರೆಯುತ್ತಾರೆ. | 22.1 ಇಡು ನನ್ನನ್ನು.<br>22.2 ನಾನು ಹೇಳುವ ವಾಕ್ಯಕ್ಕೆ ಲೇಖನ ಚಿಹ್ನೆ ಹಾಕು.<br>22.3 ನಿನ್ನ ಅನುಭವ ಬರೆ. | 22.1 ಶಿಕ್ಷಕರು ಕೆಲವು ಪದಗಳನ್ನು ಬರೆದು ಅದಕ್ಕೆ ಹೊಂದುವ ಲೇಖನ ಚಿನ್ಹೆಯನ್ನು ಇಡಲು ಪ್ರೇರೇಪಿಸಿ.<br>ಉದಾ: ಆಹಾ!, ಯಾರು?, ಹೇಳಿದರು. ಇತ್ಯಾದಿ |
| **23.** | | * ಸಂದರ್ಭಕ್ಕೆ ತಕ್ಕ ಲೇಖನ ಚಿಹ್ನೆಗಳನ್ನು ಬಳಸುತ್ತಾರೆ. | 23.1 ನನ್ನನ್ನು ಹೆಚ್ಚಿಸಿ ಸೌಂದರ್ಯ ಹೆಚ್ಚಿಸಿ.<br>23.2 ನನ್ನ ಮಾತಿಗೆ | 23.1 ಶಿಕ್ಷಕರು ಕಪ್ಪು ಹಲಗೆಯ ಮೇಲೆ ಲೇಖನ ಚಿನ್ಹೆ ರಹಿತ ಅನೇಕ ವಾಕ್ಯಗಳನ್ನು ಬರೆದು ಅದಕ್ಕೆ  ಸೂಕ್ತ ಲೇಖನ ಚಿನ್ಹೆ ಬಳಸಿ ವಿದ್ಯಾರ್ಥಿಗಳಿಂದ ಬರೆಸಿ. |

<table>
<tr><td></td><td></td><td></td><td>ಲೇಖ ಚಿಹ್ನೆ ಹೇಳು.<br>23.3 ಹೊಂದಿಸಿ ಬರೆ.</td><td></td></tr>
<tr><td>24.</td><td></td><td>* ಸೂಕ್ತ ಲೇಖನ ಚಿನ್ಹೆ ಬಳಸಿ ವಾಕ್ಯಗಳನ್ನು ಬರೆಯುತ್ತಾರೆ.</td><td>24.1 ಮುದ್ರಿತ ಸಾಹಿತ್ಯ.<br>24.2 ಶಿಕ್ಷಕರು ವಾಕ್ಯಗಳನ್ನು ನೀಡಿಕೆ (ಮೌಖಿಕವಾಗಿ)<br>24.3 ಗೆಳೆಯನ ಮಾತು ಮಿತ್ರನ ಬರಹ.</td><td>24.1 ಶಿಕ್ಷಕರು / ಗೆಳೆಯರು ಸ್ವರಭಾರ ಏರಿಳಿತದೊಂದಿಗೆ ಹೇಳುವ ಸಾಲುಗಳನ್ನು ವಿದ್ಯಾರ್ಥಿಗಳು ಸೂಕ್ತಲೇಖನ ಚಿನ್ಹೆ ಬಳಸಿ ಬರೆಯಲು ಪ್ರೇರೇಪಿಸಿ.</td></tr>
<tr><td>25.</td><td>9. ಸರಳ, ಕ್ರಿಯಾತ್ಮಕ, ಸಾಂದರ್ಭಿಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವರು.</td><td>* ಕರ್ತೃ, ಕರ್ಮ, ಕ್ರಿಯಾ ಪದಗಳನ್ನು ಗುರುತಿಸುತ್ತಾರೆ.</td><td>25.1 ಯೋಚಿಸು – ಜೋಡಿಸು.<br>25.2 ಸರಿ ಹೊಂದಿಸು.<br>25.3 ನನ್ನಂತೆ ಹೊಸದನ್ನು ಕಟ್ಟು.</td><td><table>
<tr><th>ಕರ್ತೃ</th><th>ಕರ್ಮ</th><th>ಕ್ರಿಯೆ</th></tr>
<tr><td>ಶಿಕ್ಷಕರು</td><td rowspan="6">ಹಾಡನ್ನು</td><td>ಹಾಡುತ್ತಾನೆ.</td></tr>
<tr><td>ಅಮ್ಮ</td><td>ಹಾಡುತ್ತಾರೆ.</td></tr>
<tr><td>ಶಂಕರನು</td><td>ಹಾಡುತ್ತದೆ.</td></tr>
<tr><td>ಕೋಗಿಲೆಯು</td><td>ಹಾಡುತ್ತಾಳೆ.</td></tr>
<tr><td>ಗೀತಾಳು</td><td>ಹಾಡುತ್ತಾಳೆ</td></tr>
<tr><td>ಅವರು</td><td>ಹಾಡುತ್ತಾರೆ</td></tr>
</table>25.1 ಮಾದರಿಯಂತೆ ಇನ್ನಿತರ ಕೋಷ್ಟಕಗಳನ್ನು ಬಳಸಿಕೊಂಡು ಕರ್ತೃ, ಕರ್ಮ, ಕ್ರಿಯಾಪದಗಳನ್ನು ಅರ್ಥೈಸಿ.</td></tr>
<tr><td>26.</td><td></td><td>* ವಚನಗಳನ್ನು ಗುರುತಿಸಿ ಬರೆಯುತ್ತಾರೆ.</td><td>26.1 ನಾನು ಆದೆ ಹೆಚ್ಚು ಕೈಗಳ ಮೇಲೆ ಚಾಚು.</td><td>26.1 ಮಕ್ಕಳ ನಾಯಕತ್ವವನ್ನು ಬಳಸಿಕೊಂಡು ಕೆರೆ – ದಡ ಆಟದಂತೆಯೇ ಏಕವಚನದ ಪದ ಹೇಳಿದಾಗ ಒಂದು ಕೈ ಮೇಲೆತ್ತುವಂತೆಯೂ, ಬಹುವಚನ ಪದ</td></tr>
</table>

| | | | | |
|---|---|---|---|---|
| | | | 26.2 ಪದಬಂಧ.<br>26.3 ಗುಂಪಿನಲ್ಲಿ ನನ್ನನ್ನು ಹುಡುಕು. | ಹೇಳಿದಾಗ ಎರಡೂ ಕೈಗಳನ್ನೂ ಮೇಲೆತ್ತುವಂತೆಯೂ ಸೂಚಿಸಿ, ಆಟ ಆಡಿಸಿ ವಚನಗಳ ವಿಧ ಹಾಗೂ ಉದಾಹರಣೆಗಳನ್ನು ತಿಳಿಸಿ. |
| 27. | | * ಲಿಂಗಗಳ ವಿಧಗಳನ್ನು ಅರಿತು ಬರೆಯುತ್ತಾರೆ. | 27.1 ಬಣ್ಣ<br>ಬಣ್ಣ<br>ಬಣ್ಣಾ...<br>ಬೇರೆ ಹೇಳೋ ಅಣ್ಣಾ...!<br>27.2 ಒಂದಕ್ಕೆ ಎರಡನ್ನು ಕಟ್ಟು.<br>27.3 ಗುಂಪಿನಲ್ಲಿ ಹುಡುಕು. | 27.1 ಮೂರು ಬಣ್ಣದ ಕಾರ್ಡ್ ಗಳಲ್ಲಿ ಮೂರು ಲಿಂಗಗಳಿಗೆ ಸಂಬಂಧಿಸಿದ ಪದಗಳನ್ನು ಪ್ರತ್ಯೇಕವಾಗಿ ಬರೆದುಕೊಂಡು, ಮಕ್ಕಳಿಗೆ ನೀಡಿ ಆ ಬಣ್ಣದ ಕಾರ್ಡ್ ಸಿಕ್ಕಿರುವ ಮಕ್ಕಳು ಪ್ರತ್ಯೇಕ ಗುಂಪುಗಳಲ್ಲಿದ್ದು, ತಮಗೆ ಸಿಕ್ಕ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸಿ. ಮೂರು ಗುಂಪುಗಳಲ್ಲಿ ಪದಗಳನ್ನು ಪ್ರತ್ಯೇಕವಾಗಿ ಬರೆದ ನಂತರ, ಕಾರಣವನ್ನು ಮಕ್ಕಳಿಂದಲೇ ಹೇಳಿಸುತ್ತಾ ಲಿಂಗಗಳ ವಿಧಗಳನ್ನು ತಿಳಿಸಿ. |
| 28. | ಔಪಚಾರಿಕ, ಅನೌಪಚಾರಿಕ ಪತ್ರ ಮತ್ತು ಕಿರು ಟಿಪ್ಪಣಿಗಳನ್ನು ಸ್ವತಂತ್ರವಾಗಿ ರಚಿಸುವರು. | * ಪತ್ರ ಸಂಬೋಧನೆಗಳನ್ನು ತಿಳಿಯುತ್ತಾರೆ. | 28.1 ಜೋಡಿ ಮಾಡಿ - ಮೋಡಿ ನೋಡಿ.<br>28.2 ಪತ್ರ ವಿಶೇಷ.<br>28.3 ಪತ್ರದ ಪಯಣ | 28.1 ‘ಅ’ ಪಟ್ಟಿಯಲ್ಲಿ ಸಂಬೋಧನೆ, ‘ಬ’ ಪಟ್ಟಿಯಲ್ಲಿ ಯಾರಿಗೆ ಎಂಬ ಅಂಶವನ್ನು ಕಪ್ಪು ಹಲಗೆಯ ಮೇಲೆ ಬರೆದು ಮಕ್ಕಳೇ ಗೆರೆ ಎಳೆದು ಹೊಂದಿಸಲು ಪ್ರೇರೇಪಿಸಿ. |
| 29. | | * ವ್ಯಾವಹಾರಿಕ ಹಾಗೂ ವೈಯಕ್ತಿಕ ಪತ್ರ ಬರೆಯಲು ತಿಳಿಯುತ್ತಾರೆ. | 29.1 ಓಲೆ ಕರೆಯೋಲೆ.<br>29.2 ಮಿತ್ರನಿಗೆ ಪತ್ರ.<br>29.3 ನಿಮಗಾಗಿ | 29.1 ಶಿಕ್ಷಕರು ಮಾದರಿ ಪತ್ರವೊಂದನ್ನು ಪ್ರದರ್ಶಿಸಿ, ಮಕ್ಕಳಿಂದಲೂ ಅದೇ ರೀತಿ ಬರೆಸುತ್ತಾ ಪತ್ರಲೇಖನ ಹಂತಗಳನ್ನು ಅರಿತುಕೊಳ್ಳಲು ಅನುಕೂಲಿಸಿ. |

| | | | | |
|---|---|---|---|---|
| | | | ನನ್ನ ಮನವಿ. | |
| 30. | | * ಸರಳ ಟಿಪ್ಪಣಿಗಳನ್ನು ಬರೆಯುತ್ತಾರೆ. | 30.1 ನನ್ನ ಆಯ್ಕೆ – ನನ್ನ ಬರಹ.<br>30.2 ನನ್ನ ಇಷ್ಟದ ವಿಷಯ.<br>30.3 ಲಘು ಪ್ರಬಂಧಗಳು | 30.1 ಮಕ್ಕಳಿಗೆ ನಿರ್ದಿಷ್ಟ ವಿಷಯಗಳನ್ನು ನೀಡಿ, ಟಿಪ್ಪಣಿ ಬರೆಯಲು ಸೂಚಿಸಿ. ಉದಾ: ನನ್ನ ಶಾಲೆ, ಶಾಲಾ ಕೈತೋಟ, ಗ್ರಂಥಾಲಯ ಇತ್ಯಾದಿ |